## ವಜ್ರ ಕಳ್ಳಸಾಗಾಣಿಕೆ ಜಾಲ

ನಮ್ಮ ದೇಶದ ವಜ್ರೋದ್ಯಮದಲ್ಲಿ ಕಳ್ಳಸಾಗಾಣಿಕೆಯ ದೊಡ್ಡ ಜಾಲವೇ ಇದೆ ಎನ್ನುವುದು ಆಗಾಗ್ಗೆ ಪತ್ರಿಕೆಗಳಲ್ಲಿ ವರದಿಯಾಗುತ್ತಿದೆ. ಲಕ್ಷಗಟ್ಟಲೆ ಡಾಲರ್ ಮೌಲ್ಯದ ವಜ್ರಗಳನ್ನು ಅಕ್ರಮವಾಗಿ ದೇಶದ ಗಡಿಭಾಗಗಳಲ್ಲಿ ಹಡಗುಗಳ ಮೂಲಕ ದಕ್ಷಿಣ ಏಷ್ಯಾ ರಾಷ್ಟ್ರಗಳಿಗೆ ಸಾಗಿಸಲಾಗುತ್ತಿದೆ. ಮುಖ್ಯವಾಗಿ ಥಾಯ್ಲೆಂಡ್‌ಗೆ ದೊಡ್ಡ ಮಟ್ಟದ ಸಾಗಣೆಯಾಗುತ್ತದೆ. ಥಾಯ್ಲೆಂಡ್‌ನಲ್ಲಿ ವಜ್ರದ ಆಮದು ಮತ್ತು ಸುಂಕದ ಕಾಯಿದೆ ಅತ್ಯಂತ ಸಡಿಲವಿರುವುದು ಇದಕ್ಕೆ ಮುಖ್ಯ ಕಾರಣ.

ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲೇ ಅತ್ಯಂತ ಹೆಚ್ಚು ವಜ್ರಾಭರಣ ತಯಾರಿಸುವ ದೇಶ ನಮ್ಮದು. ಇಲ್ಲಿ ವಜ್ರದ ಆಭರಣವನ್ನು ರಫ್ತು ಮಾಡಲು ಅತಿ ಹೆಚ್ಚಿನ ಸುಂಕವಿದೆ. ಬ್ಯಾಂಕಾಕ್ ಮೂಲದ ಉದ್ಯಮಿಗಳು ದೇಶದ 'ಡೈಮಂಡ್ ಹಬ್' ಆಗಿರುವ ಮುಂಬಯಿ ಮತ್ತು ಸೂರತ್‌ಗಳಿಂದ ಯಥೇಚ್ಛ ವಜ್ರಗಳನ್ನು ಕಳ್ಳ ಸಾಗಾಣಿಕೆ ಮಾಡುತ್ತಿರುವ ವರದಿಗಳಿವೆ. ಹವಾಲ ಜಾಲದ ಕೈವಾಡವೂ ಇದರಲ್ಲಿದೆ ಎನ್ನಲಾಗಿದೆ. ಎರಡು ವರ್ಷಗಳ ಹಿಂದೆ, ಪ್ಯಾರಿಸ್ ಮೂಲದ 'ಫೈನಾನ್ಶಿಯಲ್ ಆ್ಯಕ್ಷನ್ ಟಾಸ್ಕ್ ಫೋರ್ಸ್' ಮಾಡಿದ ವರದಿಯ ಪ್ರಕಾರ, ಭಯೋತ್ಪಾದಕರೂರು ಭಾರತದ ವಜ್ರೋದ್ಯಮದಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ. ವಿಶ್ವಸಂಸ್ಥೆಯು ಮಾರಾಟಕ್ಕೆ ನಿರ್ಬಂಧ ಹೇರಿರುವ 'ಬ್ಲಡ್ ಡೈಮಂಡ್' ಅನ್ನು ಐವರಿ ಕೋಸ್ಟ್ ಮತ್ತು ಲೈಬೀರಿಯದಿಂದ ಅಕ್ರಮವಾಗಿ ಸಾಗಿಸಿ ಮಾರಾಟ ಮಾಡುವ ದಂಧೆಯೂ ನಡೆಯುತ್ತಿದೆ.

ವಜ್ರೋದ್ಯಮ ಭಾರತದಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿದೆ. ಸುಮಾರು ಐದು ಲಕ್ಷ ಜನರಿಗೆ ನೇರ ಉದ್ಯೋಗ ಒದಗಿಸಿರುವ ಕ್ಷೇತ್ರವಿದು. ಉದ್ಯಮಿಗಳಿಗೆ ಅತ್ಯಧಿಕ ಲಾಭಾಂಶವನ್ನು ತಂದುಕೊಡುವ ಉದ್ಯಮವೂ ಇದಾಗಿದೆ.

ಯಿಂದ 20 ಲಕ್ಷದವರೆಗಿನ ಆಭರಣವನ್ನು ದಿನಾ ಬಳಸುವವರಿಗಾಗಿ, ವೈವಿಧ್ಯಮಯ ಒಡವೆ ವಿನ್ಯಾಸಗಳನ್ನು ಸಂಗ್ರಹ ಮಾಡುವವರಿಗಾಗಿ, ಮದುವೆಯಂಥ ಶುಭ ಸಮಾರಂಭಕ್ಕೆ ಬಳಸುವವರಿಗಾಗಿಯೇ ತಯಾರು ಮಾಡಿದ್ದೇವೆ. ಇದು ಮಧ್ಯಮ ವರ್ಗದವರನ್ನೂ ಸೆಳೆಯುವುದಕ್ಕಾಗಿ ಮಾಡಿದ ಉಪಾಯ' ಎಂದು ಹೇಳುತ್ತಾರೆ ಬೆಂಗಳೂರಿನ ಶ್ರೀ ಕೃಷ್ಣಯ್ಯ ಚೆಟ್ಟಿ ಜ್ಯುವೆಲ್ಲರಿಯ ವ್ಯವಸ್ಥಾಪಕ ನಿರ್ದೇಶಕರಾದ ವಿನೋದ ಹಯಗ್ರೀವ್.

ನಮ್ಮ ಜ್ಯುವೆಲ್ಲರಿಯಲ್ಲಿ ವಜ್ರದ ಆಭರಣದ ಅಪರೂಪದ ಸಂಗ್ರಹ ಇದೆ. 'ಅನ್‌ಯೂಸುವಲ್ ಕಲೆಕ್ಷನ್' ಹೆಸರಿನ ಈ ಆಭರಣದ ಫಿನಿಶಿಂಗ್, ಕ್ರಾಫ್ಟ್‌ಮನ್‌ಶಿಪ್, ಡಿಸೈನ್.. ಎಲ್ಲ ಆಯಾಮಗಳಲ್ಲಿಯೂ ಬೇರೆಲ್ಲಿಯೂ ಸಿಗದಂಥ ಸಂಗ್ರಹವಾಗಿದೆ. ಇದಕ್ಕಾಗಿ ಆಭರಣ ತಯಾರಿಕೆಯಲ್ಲಿ ಕನಿಷ್ಠ 20 ವರ್ಷ ಪಳಗಿದವರನ್ನು ವಜ್ರದ ಆಭರಣ ವಿನ್ಯಾಸಕ್ಕಾಗಿ ನೇಮಿಸಿದ್ದೇವೆ. ಇವರಿಂದ 'ಹೈಯರ್ ಎಂಡ್' ಒಡವೆ, ಅತ್ಯಾಧುನಿಕ ತಂತ್ರಜ್ಞಾನದ ಆಭರಣ ಗ್ರಾಹಕರ ಕೈಸೇರುತ್ತದೆ. ಕಳೆದ 15 ವರ್ಷಗಳಿಂದ ಇಲ್ಲಿ ಆಭರಣವನ್ನು ಒಮ್ಮೆ ಖರೀದಿಸಿದವರು ಮತ್ತೆ ಮತ್ತೆ ಹುಡುಕಿಕೊಂಡು ಬರುತ್ತಾರೆ, ಫೋನ್ ಮಾಡಿ ಹೊಸ ಡಿಸೈನ್ ಬಗ್ಗೆ ವಿಚಾರಿಸುತ್ತಾರೆ. ಅಂಥ ನಂಬಿಕೆ ವಜ್ರದ ಒಡವೆಯ ಮಟ್ಟಿಗೆ ಕಾಯ್ದುಕೊಂಡು ಬಂದಿದ್ದೇವೆ' ಎಂದೂ ವಿವರಿಸುತ್ತಾರೆ ವಿನೋದ ಹಯಗ್ರೀವ್.

'ಒಂದು ಕ್ಯಾರೆಟ್ ವಜ್ರಕ್ಕೆ 50 ಸಾವಿರ ರೂಪಾಯಿಯಿಂದ ಹಿಡಿದು ಒಂದು ಕೋಟಿ ರೂಪಾಯಿವರೆಗೂ ಬೆಲೆ ಇದೆ. ವಿನ್ಯಾಸವನ್ನು ಇಂದಿನ ಟ್ರೆಂಡ್‌ಗೆ ತಕ್ಕಂತೆ ರೂಪಿಸುತ್ತೇವೆ' ಎಂದು ಹೇಳುತ್ತಾರೆ ಕೃಷ್ಣಯ್ಯ ಚೆಟ್ಟಿ ಜ್ಯುವೆಲ್ಲರಿ ಮಳಿಗೆಯಲ್ಲಿ ಹಿರಿಯ ವಿನ್ಯಾಸಗಾರ ಹಾಗೂ ಆಭರಣ ತಜ್ಞರಾಗಿರುವ ವಿಶ್ವನಾಥನ್ ಎಂ.

ಬೆಂಗಳೂರಿನ ಕೆಲವು ಪ್ರಮುಖ ಆಭರಣ ಮಳಿಗೆಗಳು ವೈವಿಧ್ಯಮಯ ವಿನ್ಯಾಸಗಳ ವಜ್ರದ ಆಭರಣಗಳನ್ನು ಮದುಮಗಳ ಅಲಂಕಾರಕ್ಕಾಗಿಯೇ ವಿನ್ಯಾಸಗೊಳಿಸುತ್ತಿವೆ. ಪ್ರತಿಭಾ ಜ್ಯುವೆಲ್ಲರಿ, ಆಭರಣ ಜ್ಯುವೆಲ್ಲರಿ, ರಾಜ್ ಡೈಮಂಡ್ಸ್, ನೀಲಕಂಠ ಜ್ಯುವೆಲ್ಲರಿ ಈ ಸಂಸ್ಥೆಗಳೂ ವಜ್ರಾಭರಣಗಳಿಗೆ ಹೆಸರಾಗಿವೆ.

ವಜ್ರದ ಆಭರಣಗಳು ಅಮೂಲ್ಯ ಆಸ್ತಿ. ಸಂಗ್ರಹಯೋಗ್ಯವಾದ ಈ ಆಭರಣಗಳ ಬಣ್ಣ ಮಾಸುವುದಿಲ್ಲ, ಅಂದಗೆಡುವುದಿಲ್ಲ. ಎಷ್ಟು ಬಾರಿ ಬಳಸಿದರೂ ಹಳತಾಗುವುದೇ ಇಲ್ಲ. ಮದುವೆ, ಮುಂಜಿ ಮುಂತಾದ ಶುಭ ಸಮಾರಂಭಗಳಿಗೆ, ಪಾರ್ಟಿ, ಔತಣಕೂಟದಂತಹ ಸಮಾರಂಭಗಳಿಗೆ ಹೋಗುವಾಗ ಒಂದೇ ಒಂದು ವಜ್ರದ ನೆಕ್ಲೆಸ್ ತೊಟ್ಟರೂ ಅದು 'ಗ್ರ್ಯಾಂಡ್ ಲುಕ್'ಅನ್ನೇ ಕೊಡುತ್ತದೆ. ವಜ್ರದ ಆಭರಣ ಸಾಂಪ್ರದಾಯಿಕ ಮತ್ತು ಆಧುನಿಕ ಎರಡೂ ಮನೋಭಾವಕ್ಕೆ ಸರಿಯಾಗಿ ಹೊಂದುತ್ತದೆ.

